# ಕರ್ನಾಟಕ ರಾಜ್ಯ ಫಾರ್ಮಸಿ ಪರಿಷತ್ತು

(ಫಾರ್ಮಸಿ ಕಾಯಿದೆ 1948 ಅಡಿಯಲ್ಲಿ ಸ್ಥಾಪಿತ)

# Karnataka State Pharmacy Council

(Constituted Under Pharmacy Act 1948)


ನಂ. ಕೆಎಸ್‌ಪಿಸಿ(೧)/೦೨೪/೨೦೧೬-೧೭ ೧೪-೦೨-೨೦೧೭

## ಪ್ರಕಟಣೆಯ ಕೃಪೆಗಾಗಿ

ಕರ್ನಾಟಕ ಸರ್ಕಾರವು ಫಾರ್ಮಸಿ ಪ್ರಾಕ್ಟೀಸ್ ರೆಗ್ಯುಲೇಶನ್ ೨೦೧೫ (ಪಿಪಿಆರ್, ೨೦೧೫), ಅನ್ನು ಕರ್ನಾಟಕ ಗೆಜೆಟ್, ಸಂಪುಟ ೧೫೧, ನವೆಂಬರ್ ೨೪, ೨೦೧೫ ರ ಸಂಚಿಕೆಯಲ್ಲಿ ಅಧಿಸೂಚನೆ ಸಂಖ್ಯೆ ಎಚ್‌ಎಫ್‌ಡಬ್ಲ್ಯು ೧೬೩ ಪಿಟಿಡಿ ೨೦೧೬, ದಿನಾಂಕ ಜೂನ್ ೧೭, ೨೦೧೬ ರಂತೆ ಪುನಃ ಪ್ರಕಟಿಸಿರುತ್ತದೆ.

ಎಲ್ಲಾ ನೋಂದಾಯಿತ ಫಾರ್ಮಾಸಿಸ್ಟ್‌ರು (ಅಜೀವ ಸದಸ್ಯರು (Life Member), ಎಲ್‌ಟಿಆರ್ ಶುಲ್ಕ ಹಣ ಪಾವತಿಸಿದವರು (LTR Fees), ಕಾಯಂ ಶುಲ್ಕ ಹಣ ಪಾವತಿಸಿದವರು (fees permanently paid)) ತಮ್ಮ ನೋಂದಣಿಯನ್ನು ಫಾರ್ಮಸಿ ಕಾಯಿದೆ ೧೯೪೮, ಸೆಕ್ಷನ್.೩೪ರ ವಿಧಿಯ ಅನ್ವಯ ನವೀಕರಿಸುವುದು ಅಗತ್ಯ.

ಕಾಯಿದೆ ಅನ್ವಯ, ನೊಂದಣಿಯಾದ ವರ್ಷದ ನಂತರ, ಅಂದರೆ ಡಿಸೆಂಬರ್ ೩೧ರ ನಂತರ ಫಾರ್ಮಾಸಿಸ್ಟ್‌ರು ತಮ್ಮ ಹೆಸರನ್ನು ರಿಜಿಸ್ಟರಿನಲ್ಲಿ ಜೀವಂತ ಇರಿಸಿಕೊಳ್ಳಲು, ನಿಗದಿತ ವಾರ್ಷಿಕ ಶುಲ್ಕವನ್ನು ಪ್ರತೀ ವರ್ಷ ಪಾವತಿಸುವ ಮೂಲಕ ನವೀಕರಿಸಿಕೊಳ್ಳಬೇಕು. ನವೀಕರಣದ ಶುಲ್ಕಗಳನ್ನು ಸಂಬಂಧಿಸಿದ ವರ್ಷದ ಮಾರ್ಚ್ ೩೧ನೇ ದಿನಾಂಕಕ್ಕಿಂತ ಮೊದಲೇ ಪಾವತಿಸಬೇಕು.

ಫಾರ್ಮಸಿ ಪ್ರಾಕ್ಟೀಸ್ ರೆಗ್ಯುಲೇಶನ್ ೨೦೧೫ರ (Pharmacy Practice Regulation, 2015), ಪ್ರಕಾರ ನೋಂದಣಿಯ ನವೀಕರಣಕ್ಕೆ ಫಾರ್ಮಾಸಿಸ್ಟ್‌ರು ೫ ವರ್ಷಗಳ ಕಾಲಾವಧಿಯಲ್ಲಿ ರಾಜ್ಯದ ಫಾರ್ಮಸಿ ಕೌನ್ಸಿಲ್‌ನಿಂದ ಸಂಘಟಿಸಲಾಗುವ ಒಂದು ದಿನದ ಅವಧಿಯ ಕನಿಷ್ಠ ೨ ಫಾರ್ಮಸಿ ರಿಫ್ರೆಶರ್ ಕೋರ್ಸುಗಳಿಗೆ ಹಾಜರಾಗತಕ್ಕದ್ದು. (ನಿಯಮ.೪.೨, ಪಿಪಿಆರ್, ೨೦೧೫) ಈ ವಿಚಾರವಾಗಿ ಕರ್ನಾಟಕ ರಾಜ್ಯ ಫಾರ್ಮಸಿ ಪರಿಷತ್ತನ್ನು ಸಂಪರ್ಕಿಸತಕ್ಕದ್ದು.

ಕೌನ್ಸಿಲ್ ಎಲ್ಲ ನೋಂದಾಯಿತ ಫಾರ್ಮಾಸಿಸ್ಟ್‌ರ ವಾಸದ ಖಾಯಂ ಹಾಗೂ ವೃತ್ತಿಪರ ವಿಳಾಸ, ಆಧಾರ್ ಸಂಖ್ಯೆ, ಮೊಬೈಲ್ ಸಂಖ್ಯೆ ಮತ್ತು ಇಮೇಲ್ ಅನ್ನು ಅಪ್‌ಡೇಟ್ ಮಾಡುವ ಪ್ರಕ್ರಿಯೆಯನ್ನು ನಡೆಸುತ್ತಿದೆ.

ಆದ್ದರಿಂದ ಎಲ್ಲ ನೋಂದಾಯಿತ ಫಾರ್ಮಾಸಿಸ್ಟ್‌ರು ತಮ್ಮದೇ ಲಾಗ್‌ಇನ್ ಖಾತೆಯನ್ನು www.kspcdic.com ವೆಬ್‌ಸೈಟಿನಲ್ಲಿ ರಚಿಸಿ ಮಾರ್ಚ್ ೧೫, ೨೦೧೭ರ ಒಳಗೆ ತಮ್ಮ ಪ್ರೊಫೈಲ್ ಅಪ್‌ಡೇಟ್ ಮಾಡಲು ಸೂಚಿಸಲಾಗಿದೆ. ಎಲ್ಲಾ ಅರ್ಹ ಫಾರ್ಮಸಿಸ್ಟರು ನೋಂದಣಿಗಾಗಿ ಅರ್ಜಿಯನ್ನು ಆನ್‌ಲೈನ್ ಮೂಲಕವಾಗಿ ಮಾತ್ರ ಸಲ್ಲಿಸಲು ಸೂಚಿಸಲಾಗಿದೆ.

ಅಧ್ಯಕ್ಷರು
ಗಂಗಾಧರ್ ವಿ. ಯಾವಗಲ್
President
Karnataka State
Pharmacy Council

ರಿಜಿಸ್ಟ್ರಾರ್
ಪ್ರೊ.ಶಿವಾನಂದ ಬಿ.ಜಿ.
Registrar
Karnataka State
Pharmacy Council


#514/E, 1st Main, 1st Cross, Vijayanagar 2nd Stage, Hampinagar, Bengaluru - 560 104, Karnataka, India.
Ph : 91-80-23404000, 23383142, 23202345 E-mail : kspcreg@gmail.com, kspcblr@gmail.com Web : www.kspcdic.com